ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	561 (582)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	10.03.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೊಸಬೆಟ್ಟು ಗ್ರಾಮದಿಂದ ಸುರತ್ಕಲ್ ಗೋವಿಂದ ದಾಸ ಕಾಲೇಜಿನವರೆಗೆ ಬೀದಿ ದೀಪಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬೀದಿ ದೀಪಗಳನ್ನು ಅಳವಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಪ್ರದೇಶದಲ್ಲಿ ಯಾವಾಗ ಬೀದಿ ದೀಪಗಳನ್ನು ಅಳವಡಿಸಲಾಗುವುದು;	ಹೊಸಬೆಟ್ಟು ಜಂಕ್ಷನ್‌ನಿಂದ ಸುರತ್ಕಲ್ ಗೋವಿಂದದಾಸ ಕಾಲೇಜ್ ಜಂಕ್ಷನ್‌ವರೆಗೂ ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ 66 ರ ವ್ಯಾಪ್ತಿಗೆ ಬರುತ್ತಿದ್ದು, ಈ ಬಗ್ಗೆ ರೂ 34.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ಮಂಗಳೂರು ಮಹಾನಗರಪಾಲಿಕೆಯಿಂದ ಸಿದ್ಧಪಡಿಸಲಾಗಿದೆ.
ಇ)	ರಸ್ತೆಯ ಇಕ್ಕೆಲಗಳು ರಸ್ತೆಗಿಂತ ತೀರಾ ಕೆಳ ಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಸ್ತೆಯ ಇಕ್ಕೆಲಗಳಲ್ಲಿ ಮಣ್ಣು ತುಂಬಿ ರಸ್ತೆಯ ಹಂತಕ್ಕೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೊಸಬೆಟ್ಟು ಗ್ರಾಮದಿಂದ ಸುರತ್ಕಲ್ ಗೋವಿಂದ ದಾಸ ಕಾಲೇಜಿನವರೆಗಿನ ರಸ್ತೆಯು ರಾಷ್ಟ್ರೀಯ ಹೆದ್ದಾರಿ 66ರ ವ್ಯಾಪ್ತಿಗೆ ಒಳಪಟ್ಟಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕ್ರಮವಹಿಸಬೇಕಾಗಿರುತ್ತದೆ. ಪಾಲಿಕೆ ವ್ಯಾಪ್ತಿಗೆ ಒಳಪಡುವ ರಸ್ತೆಗಳ ಇಕ್ಕೆಲಗಳನ್ನು ಮಣ್ಣು ತುಂಬಿಸಿ ರಸ್ತೆಯ ಎತ್ತರಕ್ಕೆ ಏರಿಸಲು ಕ್ರಮವಹಿಸಲಾಗುತ್ತಿದೆ.

ನಅಇ 18 ಎಂಎಂಸಿ 2020 (ಇ)

(ಬಿ.ಎ. ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು